‘ಶೆಟ್ರ ಅಳಿಯನಾಗಿದ್ರೆ ಅವರ ಮನೆಯಲ್ಲಿ ತಿರುಗಾಡಬೇಕಿತ್ತು. ನಮ್ಮ ಹಿಂದೆ ಯಾಕೆ ಬಂದೆ?’ ಆಶಾ ಗದರಿ ಕೇಳಿದಳು.

ಹುಡುಗ ಅಳುತ್ತ ‘ಅಕ್ಕ, ಮಾವ ನನಗೆ ಈ ಸಂಜಯಣ್ಣನ ಹಿಂದೆ ಹೋಗಿ ಇವ ಏನು ಮಾಡ್ತಾನೆ, ಎಲ್ಲಿಗೆ ಹೋಗ್ತಾನೆ ಅಂತ ನೋಡ್ಲಿಕ್ಕೆ ಹೇಳಿದ್ರು. ನನಗೂ ಇದು ಬಹಳ ಇಷ್ಟ ಆಯ್ತು. ಅದಕ್ಕೇ ಇವರ ಹಿಂದೆ ಎರಡು ದಿನದಿಂದ ಬರ್ತಾ ಇದ್ದೇನೆ’ ಅಂದ.

ಆಶಾಳಿಗೆ ಆಶ್ಚರ್ಯ ಆಯಿತು.

ಅಲ್ಲಾ, ಈ ಶೆಟ್ರಿಗೆ ಏನಾಯ್ತು? ಈ ಸಂಜಯ್ ಹಿಂದೆ ಇವನನ್ನು ಯಾಕೆ ಬಿಟ್ಟಿದ್ದಾರೆ ಅಂತ ಅಂದುಕೊಳ್ಳುತ್ತಾ ‘ಯಾಕೋ, ಶೆಟ್ರಿಗೆ ಸಂಜಯ್ ಬಗ್ಗೆ ಯಾಕೆ ಈ ಕುತೂಹಲ?’ ಅಂತ ಕೇಳಿದಳು.

ಸಂಜಯನಿಗೆ ಆಶ್ಚರ್ಯವೂ ನಾಚಿಕೆಯೂ ಆಗಿ ಬಾಯಿಬಿಟ್ಟು ಕೇಳತೊಡಗಿದ.

ಹುಡುಗ ಹೇಳಿದ – ‘ಮಾವ ಹೇಳಿದ್ರು, ಈ ಸಂಜಯನಿಂದ ನಮ್ಮ ಊರಿಗೇ ಗಂಡಾಂತರ ಬರ್ತದಂತೆ. ಹಾಗಾಗಿ ಇವ ಏನ್ ಮಾಡ್ತಾನೆ ಅಂತ ನೋಡ್ಲಿಕ್ಕೆ ಹೇಳಿದ್ರು. ಈ ಊರನ್ನೇ ಉಳಿಸುವ ಅವಕಾಶ ಬೇಕಂದ್ರೂ ನಮ್ಮಂತ ಹುಡುಗರಿಗೆ ಸಿಗುದಿಲ್ಲ ಅಲ್ವ? ಹಾಗಾಗಿ ಕೂಡ್ಲೇ ಒಪ್ಪಿದೆ’ ಅಂದ.

ಆಶಾಗೆ ಆಶ್ಚರ್ಯದ ಮೇಲೆ ಆಶ್ಚರ್ಯ. ಈ ಶೆಟ್ರಿಗೆ ಏನು ಭ್ರಮೆ ಹಿಡಿದಿದೆ ಅಂದುಕೊಂಡಳು.

‘ಅಲ್ಲಾ, ನಿನ್ನ ಮಾವನಿಗೆ ಏನಾಗಿದೆಯೋ? ಈ ಸಂಜಯ್ ಅಂತದ್ದು ಏನು ಮಾಡ್ತಾರಂತೆ?’ ಅಂತ ಕೇಳಿದಳು.

ಅದಕ್ಕೆ ಹುಡುಗ ತನಗೆ ಏನೂ ಗೊತ್ತಿಲ್ಲದ ಹಾಗೆ ತಲೆಯಾಡಿಸಿ ‘ನನಿಗೆ ಗೊತ್ತಿಲ್ಲಕ್ಕ, ಮಾವ ಹಾಗೆ ಹೇಳ್ತಾರೆ. ಅವರಿಗೂ ಗೊತ್ತಿದ್ದ ಹಾಗೆ ಕಾಣ್ತಿಲ್ಲ. ಇಲ್ಲದಿದ್ರೆ ನನ್ನನ್ನು ಹೀಗೆ ಹೋಗ್ಲಿಕ್ಕೆ ಹೇಳ್ತಿದ್ರಾ? ಹೇಳಿದ ಹಾಗೆ ಇವತ್ತು ನಮ್ಮ ಮಾವನ ಮನೆಯಲ್ಲಿ ಭೂತದ ಕೋಲ ಉಂಟು. ಕೋಲದಲ್ಲಿ ಈ ಬಗ್ಗೆ ಕೇಳ್ಬೇಕು ಅಂತ ಮಾವ ಹೇಳ್ತಿದ್ರು ಬೆಳಗ್ಗೆ’ ಅಂದ.

ಆಶಾಳಿಗೆ ಇದೊಂದು ಕಗ್ಗಂಟಾಗಿ ಕಂಡಿತು.

‘ಹೋಗು, ನೀನು ಬೇಗ ಮನೆಗೆ ಹೋಗು. ಇನ್ನು ಮುಂದೆ ಸಂಜಯ್ ಹಿಂದೆ ಬರ್ಬೇಡ’ ಅಂತ ಹೇಳಿದಳು.

ಹುಡುಗ ಓಡಿದ. ಆಶಾ ಸಂಜಯ್ ಮುಖ ನೋಡಿದಳು. ಅಲ್ಲಿ ನಾಚಿಕೆ ಇತ್ತು. ಸಂಜಯ್ ಆಶಾಳ ಮುಖ ನೋಡಿದ. ಅದರಲ್ಲಿ ಹೆಣ್ಣು ಹುಲಿ ತನ್ನ ಮರಿಯನ್ನು ರಕ್ಷಿಸಿ ಖುಷಿ ಪಡುವ ಭಾವನೆ ಇತ್ತು. ‘ಅಬ್ಬಾ ಇವಳು’ ಅಂದುಕೊಂಡ.

ಸಂಜಯ್ ಗುಡ್ಡದ ತುದಿಗೆ ಬಂದವನು ಆಶಾಳ ಕೆಲವಾರು ಫೋಟೊ ತೆಗೆದ. ಒಮ್ಮೆ ಸಾಮಾನ್ಯ ಹುಡುಗಿಯ ಹಾಗೆ, ಇನ್ನೊಮ್ಮೆ ಹುಲಿಯ ಜೊತೆಗೆ ಹೋರಾಡಿದ ವೀರಕನ್ಯೆಯ ಹಾಗೆ, ಮತ್ತೊಮ್ಮೆ ಕಾಡಿನ ಹೂವು ಕೊಯ್ಯುವ ಹುಡುಗಿಯಾಗಿ ಫೋಟೊ ತೆಗೆದ.

ಈ ಹುಡುಗಿಯರೇ ಹೀಗೆ – ನೀರಿನ ಹಾಗೆ. ಯಾವ ಕ್ಷಣದಲ್ಲೂ ಯಾವ ರೂಪವನ್ನೂ ಧರಿಸುತ್ತಾರೆ ಅಂದುಕೊಂಡ.

ಬೇಗ ಬೇಗನೆ ಸಂಜಯ್ ತನ್ನ ಲ್ಯಾಪ್‌ಟಾಪ್ ಕೆಲಸ ಮುಗಿಸಿದ. ಮನೆಯ ಕಡೆಗೆ ಇಬ್ಬರೂ ಹೊರಟರು.

ದಾರಿಯಲ್ಲಿ ಸಂಜಯ್ ಆಶಾಳ ಹತ್ತಿರ ಕೇಳಿದ. ‘ಈ ಶೆಟ್ರು ಯಾರು? ಅವರಿಗೆ ನನ್ನ ಬಗ್ಗೆ ಯಾಕೆ ಅಷ್ಟೊಂದು ಆಸಕ್ತಿ? ಹುಡುಗ ಈ ಊರನ್ನು ಉಳಿಸುವ ಮಾತು ಹೇಳಿದ... ಅಂತದ್ದು ಏನಿದೆ?’

ಆಶಾ ಸ್ವಲ್ಪ ಆಲೋಚನೆ ಮಾಡಿ ಹೇಳಿದಳು, ‘ಶೆಟ್ರು ನಮ್ಮೂರ ಯಜಮಾನ, ಹಾಗಾಗಿ ಅವರಿಗೆ ಊರಿನ ಬಗ್ಗೆ ಕಾಳಜಿ. ಆದರೆ ನಿಮ್ಮ ಬಗ್ಗೆ ಯಾಕೆ ಹೀಗೆ ಆಲೋಚನೆ ಮಾಡ್ತಾರೆ ಅಂತ ಗೊತ್ತಿಲ್ಲ.’

ಸಂಜಯ್ ಹೇಳಿದ, ‘ಇವತ್ತು ಭೂತದ ಕೋಲದಲ್ಲಿ ನನ್ನ ಬಗ್ಗೆ ಕೇಳ್ತಾರಂತೆ?’

ಆಶಾ ಹೇಳಿದಳು, ‘ಅವರಲ್ಲಿ ಬಹಳ ಪ್ರಭಾವದ ಪಂಜುರ್ಲಿ ಭೂತ ಇದೆ. ಇದನ್ನು ನಮ್ಮ ಮಾದನೇ ಕಟ್ಟುವವನು. ಇವತ್ತು ರಾತ್ರೆ ಕೋಲ ಇರಬೇಕು.’

‘ನೀನು ಹೋಗ್ತಿಯಾ?’ ಸಂಜಯ್ ಕೇಳಿದ.

‘ನಾವು ಹೆಚ್ಚಾಗಿ ಕೋಲಕ್ಕೆ ಹೋಗುವುದಿಲ್ಲ. ಆದ್ರೆ ಇವತ್ತು ಹೋಗ್ಬೇಕು ಅಂತ ಕಾಣುತ್ತದೆ. ನಾನು ಅಜ್ಜನ ಹತ್ರ ಕೇಳ್ತೇನೆ. ಸಾಧ್ಯವಾದರೆ ನಿಮ್ಮನ್ನೂ ಕರಕೊಂಡು ಹೋಗ್ತೇನೆ’ ಅಂದಳು.

‘ಭೂತದ ಕೋಲ ಕಟ್ಟುವುದು ನಮ್ಮ ಮಾದ ಇರುವ ಕಾರಣ ಏನೂ ಕೆಟ್ಟದು ನನ್ನ ಬಗ್ಗೆ ಹೇಳ್ಲಿಕ್ಕಿಲ್ಲ ಅಲ್ವ’ ಸಂಜಯ್ ಪ್ರಶ್ನಿಸಿದ.

ಅದಕ್ಕೆ ಆಶಾ, ‘ಭೂತದ ಕೋಲ ಮಾದ ಕಟ್ಟುವುದಾದ್ರೂ ಒಮ್ಮೆ ಭೂತ ಮೈಮೇಲೆ ಬಂದಮೇಲೆ ಮಾದನಿಗೆ ನೀವು ಯಾರು, ನಾನು ಯಾರು ಅಂತ ಗೊತ್ತಾಗುವುದಿಲ್ಲ’ ಎಂದು ಹೇಳಿದಳು.

ಸಂಜಯನಿಗೆ ಕೋಲಕ್ಕೆ ಹೋಗುವ ತವಕ ಜಾಸ್ತಿಯಾಯಿತು.

ಆಶಾ ಮನೆಗೆ ಬಂದವಳೇ ಅಜ್ಜನಲ್ಲಿ ಹೋಗಿ ‘ಅಜ್ಜ, ಇವತ್ತು ರಾತ್ರೆ ಶೆಟ್ರಲ್ಲಿ ಕೋಲ ಇದೆಯಂತೆ. ನಾನು ಸಂಜಯ್ ಅವರನ್ನು ಕರ್ಕೊಂಡು ಹೋಗ್ಲಾ?’ ಕೇಳಿದಳು.

ಶಾಸ್ತ್ರಿಗಳು ‘ಆ ಕೋಲದಲ್ಲಿ ಏನುಂಟು ಮಣ್ಣು? ಆದ್ರೂ ನಿನಗೆ ಹೋಗ್ಬೇಕಿದ್ರೆ ನನ್ನ ಅಡ್ಡಿಯಿಲ್ಲ’ ಎಂದರು.

ಆಶಾ ಸಂಜಯ್ ಜೊತೆಗೆ ಕೋಲಕ್ಕೆ ಹೋಗುವ ಸಿದ್ಧತೆ ನಡೆಸಿದಳು.

ಮನೆಯಲ್ಲಿದ್ದ ಟಾರ್ಚ್ ಲೈಟ್‌ನ ಬ್ಯಾಟರಿ ಬಹಳ ಕಡಿಮೆಯಿತ್ತು. ಆಶಾ ಒಂದು ಪಪ್ಪಾಯಿ ಗಿಡದ ಎಲೆಯನ್ನು ಅದರ ದಂಡಿನ ಜೊತೆಗೆ ಕತ್ತರಿಸಿದಳು. ಆ ಎಲೆಯ ದಂಡಿನ ಒಳಗೆ ಸೀಮೆಎಣ್ಣೆ ಸುರಿದು ಒಂದು ಬಟ್ಟೆಯ ತುಂಡನ್ನು ತಿರುವಿ ಬತ್ತಿಯಾಗಿ ಮಾಡಿದಳು. ಹೀಗೆ ಪಪ್ಪಾಯಿ ಎಲೆಯ ದೀವಟಿಗೆ (ದೊಂದಿ) ತಯಾರಾಯಿತು. ರಾತ್ರೆಯ ಊಟ ಮುಗಿದ ಕೂಡಲೇ ಆಶಾ ಸಂಜಯ್ ಜೊತೆ ಕೋಲಕ್ಕೆ ಹೊರಟಳು.

ಶಾಸ್ತ್ರಿಗಳ ಮನೆಯಿಂದ ಶೆಟ್ರ ಮನೆಗೆ ಸುಮಾರು ಒಂದು ಕಿ.ಮೀ. ದಾರಿ. ನಡುವೆ ಸಣ್ಣಗುಡ್ಡ, ಗದ್ದೆ ಹಾಗೂ ಹೊಲ. ಈ ತರಹ ಕತ್ತಲಲ್ಲಿ ದೀವಟಿಗೆ ಹಿಡಕೊಂಡು ಹೋಗುವ ಅನುಭವ ಸಂಜಯನಿಗೆ ಅದೇ ಮೊದಲು. ಆದರೆ ಆಶಾಳೋ ಬೇಗ ಬೇಗನೆ ನಡೆಯುತ್ತಿದ್ದಳು. ಸಂಜಯ್ ಅವಳ ಜೊತೆ ಹೋಗುವ ಪ್ರಯತ್ನ ಮಾಡುತ್ತಿದ್ದ. ಪಪ್ಪಾಯಿಯ ದೀವಟಿಗೆಯ ಬೆಳಕು ಕಾಲ ಕೆಳಗೆ ಬೀಳುತ್ತಿತ್ತು. ಆದರೆ ಸ್ವಲ್ಪ ಆಚೀಚೆ ನೋಡಿದರೆ ದಟ್ಟ ಕತ್ತಲು. ಅಲ್ಲಲ್ಲಿ ಕಪ್ಪೆಯ ಹಾಗೂ ಮಿಡಿತೆ ಕೂಗುವ ಶಬ್ದ. ಆಶಾ ಯಾವಾಗಿನ ತರವೇ ಏನೋ ಮಾತಾಡುತ್ತಿದ್ದಳು. ಸಂಜಯ್ ಅದಕ್ಕೆ ಹ್ಞೂಂಗುಟ್ಟುತ್ತಿದ್ದ. ಸ್ವಲ್ಪ ದೂರ ಹೋಗುವಾಗ ಈ ದೊಂದಿ ನಂದಿ ಹೋದರೆ? ಅಂತ ಸಂಜಯನಿಗೆ ಕಂಡಿತು. ಕೈಯಲ್ಲಿದ್ದ ಟಾರ್ಚ್ ಮಿಣುಕುತ್ತಿತ್ತು. ದೊಂದಿಯ ಬೆಳಕು ಆಶಾಳ ಮುಖದ ಮೇಲೆ ಬಿದ್ದು ಮುಖ ಕೆಂಪಗಾಗಿ ಕಾಣುತ್ತಿತ್ತು. ಇವಳು ಆಶಾ ಹೌದೋ ಅಲ್ಲವೋ? ಆಶಾಳ ರೂಪದಲ್ಲಿ ಬೇರೇನಾದರೂ ಬಂತೋ ಎನ್ನುತ್ತಾ ಸಂಜಯ್ ಬೆವರತೊಡಗಿದ.

ಗದ್ದೆ ಹುಣಿಯಲ್ಲಿ ಹೋಗುವಾಗ ಇಬ್ಬರೂ ಜೊತೆಯಾಗಿ ಹೋಗಲು ಜಾಗ ಅಲ್ಲಿ ಇರುವುದಿಲ್ಲ. ಆಶಾ ಮುಂದೆ ದೊಂದಿ ಹಿಡಿದು ಹೋದರೆ ಸಂಜಯ್ ಅವಳ ಹಿಂದೆ ಇದ್ದ. ಸಂಜಯ್ ಬೇಗಬೇಗನೆ ಹೆಜ್ಜೆ ಹಾಕುತ್ತ ಅಲ್ಲಲ್ಲಿ ಜಾರುತ್ತ ಹೇಗೋ ಗದ್ದೆ ದಾಟಿದ. ಇಬ್ಬರೂ ಭೂತದ ಕೋಲದ ಜಾಗಕ್ಕೆ ಬಂದರು.

ಶೆಟ್ರ ಮನೆಯ ಅಂಗಳದಲ್ಲಿ ಪಂಜುರ್ಲಿ ಭೂತದ ಕೋಲ ನಡೆಯುತ್ತಿತ್ತು. ಮಾದ ಪಂಜುರ್ಲಿ ಭೂತವಾಗಿದ್ದ. ಅವನ ಮುಖದಲ್ಲಿ ಹಂದಿಯ ಮುಖದ ಅಲಂಕಾರ ಇತ್ತು. ಬೆನ್ನ ಹಿಂದೆ ಬಹಳ ಚೆಂದದ ಅಣಿ ರಾರಾಜಿಸುತ್ತಿತ್ತು. ಇವರು ಹೋಗುವಾಗ ಕೋಲ ಅರ್ಧ ಮುಗಿದಿತ್ತು. ಭೂತ ನೆರೆದವರಿಗೆ ಅಭಯ ನೀಡಿ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಎಲ್ಲರನ್ನೂ ಹರಸುವ ಸಮಯ ಅದಾಗಿತ್ತು.

ಆಶಾ ಮತ್ತು ಸಂಜಯ್ ಬಂದುದನ್ನು ಆನಂದಣ್ಣ ನೋಡಿದರು. ಅವರಿಬ್ಬರನ್ನೂ ಕುರ್ಚಿಯಲ್ಲಿ ಕೂರಿಸಿ ಹುಡುಗನೊಬ್ಬನಿಗೆ ಎಳನೀರು ಕೊಡಲು ಹೇಳಿದರು. ಹುಡುಗ ಬೇಗನೆ ಓಡಿ ಹೋಗಿ ಕೈಯಲ್ಲಿ ಎರಡು ಎಳನೀರು ತಂದು ಆಶಾಳಿಗೂ ಸಂಜಯನಿಗೂ ಕೊಟ್ಟ. ಇಬ್ಬರೂ ಬಾಯಾರಿಕೆ ಇಲ್ಲದಿದ್ದರೂ ದಾಕ್ಷಿಣ್ಯಕ್ಕಾಗಿ ಎಳನೀರು ಕುಡಿದರು.

ಶೆಟ್ಟರು ಭೂತದ ಎದುರು ಕೈಮುಗಿದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅವರಿಗೆ ಸಂಜಯ್ ಆಗಲಿ ಆಶಾ ಆಗಲಿ ಬಂದದ್ದು ಗೊತ್ತಿರಲಿಲ್ಲ. ಎರಡು ಮೂರು ಪ್ರಶ್ನೆಗಳ ನಂತರ ನೇರವಾಗಿ ಸಂಜಯನ ವಿಷಯಕ್ಕೆ ಬಂದರು.

‘ನಮ್ಮೂರಿಗೆ ಕಾರಂತರ ಮೊಮ್ಮಗ ಬಂದಿದ್ದಾನೆ. ಇವನಿಂದ ನನಗಾಗಲೀ ಈ ಊರಿಗಾಗಲೀ ತೊಂದರೆಯಾಗುತ್ತದೆಯೇ?’

ಸಂಜಯ್ ಮತ್ತು ಆಶಾ ಮುಖ ಮುಖ ನೋಡಿದರು. ಅವರು ಈ ಪ್ರಶ್ನೆಯನ್ನು ಊಹಿಸಿರಲಿಲ್ಲ. ಅದೂ ಪಂಜುರ್ಲಿ ಭೂತ ಕಟ್ಟಿದ ನಮ್ಮ ಮಾದನಲ್ಲೇ!

ಪಂಜುರ್ಲಿ ಸ್ವಲ್ಪ ಜೋರಾಗಿ ಮೈಮೇಲೆ ಬಂದು ನಡುಗತೊಡಗಿತು. ನಂತರ ಶೆಟ್ಟರ ಕಡೆಗೆ ತಿರುಗಿ